**O.S.** ನಂಬರಃ 48/2014

**ಪಿ . ಡಬ್ಲ್ಯೂಃ 1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 06-08-2021**

**ಮುಖ್ಯ ವಿಚಾರಣೆಃ ಶ್ರೀಮತಿ ಎಸ್ ಎನ್ ಎಚ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸತ್ಯ ಇರುತ್ತದೆ ಮತ್ತು ನನಗೆ ಗೊತ್ತಿರುತ್ತದೆ. ಅದಕ್ಕೆ ನಾನು ಸಹಿಯನ್ನು ಹಾಕಿರುತ್ತೇನೆ.

2. ಪ್ರತಿವಾದಿಯು ನನಗೆ ಬರೆದುಕೊಟ್ಟಿರುವ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಹಣ ಪಾವತಿಸಿದ ರಶೀದಿಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಕಂದಾಯ ಪಾವತಿಸಿದ ರಶೀದಿಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಕರ್ನಾಟಕ ವಿದ್ಯುತ್ಶ್ ಕ್ತಿ ಮಂಡಳಿಯವರು ನನಗೆ ನೀಡಿರುವ ನೋಟೀಸನ್ನು ಹಾಜರು ಪಡಿಸಿದ್ದು , ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ವಿದ್ಯುತ್ಶ್ ಕ್ತಿ ಮಂಡಳಿ ಅಂಕೋಲಾ ಇವರು ನನ್ನ ತಂದೆಗೆ ಕಳಿಸಿರುವ ಪತ್ರವನ್ನು ಹಾಜರು ಪಡಿಸಿದ್ದು , ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ 7 ಕಲರ್ ಫೋಟೋಗಳನ್ನು ಹಾಜರು ಪಡಿಸಿದ್ದೇನೆ. ಅವುಗಳನ್ನು ನಿಪಿ.6 ರಿಂದ ನಿಪಿ.12 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಿಗೆ ಸಂಬಂಧಿಸಿದ ಸಿಡಿ ಹಾಜರು ಪಡಿಸಿದ್ದು , ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ನನ್ನ ತಂದೆಯ ಪಡಿತರ ಚೀಟಿ ಹಾಜರು ಪಡಿಸಿದ್ದು , ಅದನ್ನು ನಿಪಿ.14 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ ಅಂಕೋಲಾ ಭೂನ್ಯಾಯ ಮಂಡಳಿಯ ಆದೇಶದ ದೃಢೀಕೃತ ಪ್ರತಿ ಹಾಜರು ಪಡಿಸಿದ್ದೇನೆ. ಅದನ್ನು ನಿಪಿ.15 ಎಂದು ಗುರುತಿಸಲಾಯಿತು. ಫಾರ್ಮ ನಂಬರ 10 ರ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದೇನೆ, ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಫೋಡಿ ಮ್ಯಾಪ್ ಹಾಜರು ಪಡಿಸಿದ್ದು , ಅದನ್ನು ನಿಪಿ.17 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ ಎರಡು ಮ್ಯುಟೇಶನ ಪ್ರತಿಗಳನ್ನು ಹಾಜರು ಪಡಿಸಿದ್ದೇನೆ, ಅವುಗಳನ್ನು ನಿಪಿ.18 ಮತ್ತು ನಿಪಿ.19 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ ಎರಡು ಪುಟಗಳಿರುವ ಆರ್ ಟಿ ಸಿ ಹಾಜರು ಪಡಿಸಿದ್ದೇನೆ , ಅದನ್ನು ನಿಪಿ.20 ಎಂದು

ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ 3 ಪುಟಗಳಿರುವ ಆರ್ ಟಿ ಸಿ ಹಾಜರು ಪಡಿಸಿದ್ದು , ಅದನ್ನು ನಿಪಿ.21 ಎಂದು ಗುರುತಿಸಲಾಯಿತು. ಪ್ರತಿವಾದಿಗೆ ನೀಡಿದ ಲೀಗಲ್ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು , ಅದನ್ನು ನಿಪಿ.22 ಎಂದು ಗುರುತಿಸಲಾಯಿತು. ವಿದ್ಯುತ್ ಪಾವತಿಸಿದ ಬಿಲ್ ಹಾಜರು ಪಡಿಸಿದ್ದು , ಅದನ್ನು ನಿಪಿ.23 ಎಂದು ಗುರುತಿಸಲಾಯಿತು.

( ಮುಂದುವರೆದ ಮುಖ್ಯ ವಿಚಾರಣೆಗೆ ಶ್ರೀಮತಿ ಎಸ್ ಎನ್ ಎಚ್ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**